ವುದು. ಈ ಧಾರವಾಡ ಪೇಡವನ್ನು ಮಾತ್ರ' ಎಂದರು. ಜಯಂತಿ 'ನೋ ಸರ್' ಎಂದಳು. ಸತೀಶ್ ಕುಲಕರ್ಣಿಯವರೂ 'ಇಲ್ಲ ಮಾವ' ಎಂದು ಒತ್ತಾಯಿಸಿದರು. ರಾಯರು 'ಇಷ್ಟನ್ನೆಲ್ಲ ತಿಂದರೆ ನಾನು ಸತ್ತೇ ಹೋದೇನು. ನನ್ನ ಹೆಂಡತಿಗೆ ಮಾತ್ರ ಏನೂ ಆಗದು' ಎಂದು ಒಂದು ನಗೆ ಬಾಂಬು ಸಿಡಿಸಿ ಪೇಡವನ್ನು ಸವಿಯ ಹತ್ತಿದರು. ಇದರಿಂದ ಉತ್ತೇಜಿತರಾದ ಜಯಂತಿ, 'ಹಾಗಾದರೆ ಈ ಎರಡೂ ತಟ್ಟೆಗಳಲ್ಲಿದ್ದುದನ್ನು ಪ್ಯಾಕ್ ಮಾಡಿ ಕೊಡುತ್ತೇನೆ ಸರ್. ಮೇಡಂಗೆ ಕೊಡಿ' ಎಂದಳು. ರಾಯರು 'ಛೆ ಛೆ! ಹಾಗೆಲ್ಲ ಮಾಡಬೇಡಿ. ನನ್ನ ಹೆಂಡತಿಗೆ ಅದು ಇಷ್ಟವಾಗುವುದಿಲ್ಲ. ಶಿ ಈಸ್ ಫ್ರಮ್ ಗುತ್ತು ಫ್ಯಾಮಿಲಿ, ಅಂದರೆ ಶ್ರೀಮಂತ ಬಂಟರ ಮನೆತನದಿಂದ ಬಂದವಳು. ಗುತ್ತು ಅಂದರೆ ಇಲ್ಲಿನ ವಾಡೆಯ ಹಾಗೆ. ಅವರಿಗೆಲ್ಲ ಮರ್ಯಾದೆಯದ್ದೇ ಒಂದು ಪ್ರಶ್ನೆ ಇರುತ್ತದೆ. ಇಂಥದ್ದನ್ನೆಲ್ಲ ಕೊಂಡು ಹೋದರೆ, ನೀವು ನಿಮ್ಮ ಬ್ರಾಹ್ಮಣ ಬುದ್ಧಿ ಬಿಡಲಿಲ್ಲ! ಎಲ್ಲಿ ಬಿಡುತ್ತೀರಿ, ಎಷ್ಟೇ ಓದಿದರೂ? ಎಂದು ಹಂಗಿಸುತ್ತಾಳೆ' ಎಂದರು.

ಸತೀಶ್ ಕುಲಕರ್ಣಿ ರಾಯರ ಮನೆಗೆ ಅನೇಕ ಬಾರಿ ಹೋಗಿದ್ದರೂ ಅವರ ಪತ್ನಿ ಬಂಟರ ಪಂಗಡದಿಂದ ಬಂದವರೆಂಬ ಸತ್ಯ ಅವರಿಗೆ ಗೊತ್ತಿರಲಿಲ್ಲ. ರಾಯರು ಬ್ರಾಹ್ಮಣರಾದ್ದರಿಂದ ಅವರ ಪತ್ನಿಯೂ ಬ್ರಾಹ್ಮಣರೇ ಎಂದುಕೊಂಡಿದ್ದ ಅವರಿಗೆ ಈ ಸುದ್ದಿ 'ಶಾಕ್' ನೀಡಿದರೂ ಅದು ವಿಶೇಷ ಅಂತ ಅನಿಸಲಿಲ್ಲ. ಆದರೆ ಬಂಟರು ಇಷ್ಟು ಸ್ವಾಭಿಮಾನಿಗಳು ಎಂದಿರುವಾಗ ಈ ಬ್ರಾಹ್ಮಣನನ್ನು ಆಕೆ ಹೇಗೆ ಮದುವೆಯಾದಳು ಎಂದು ಕುತೂಹಲ ಅವರಲ್ಲಿ ಹುಟ್ಟಿತ್ತು. ಆದರೆ ಈ ಕುತೂಹಲವನ್ನು ಭೇದಿಸುವುದು ಎಷ್ಟು ಸರಿ ಎಂದು ಅವರಿಗೆ ಅನಿಸಿದರೂ ಅವರ ಮನಸ್ಸು ಸುಮ್ಮನಿರಲಿಲ್ಲ. ಸತೀಶ್ ಅಳುಕುತ್ತಾ 'ಹಾಗಾದರೆ ನಿಮ್ಮದು ಪ್ರೇಮವಿವಾಹ ಇರಬೇಕಲ್ಲ ಮಾವ?' ಎಂದಿದ್ದರು. ರಾಯರು 'ಆಫ್‌ಕೋರ್ಸ್, ಲವ್ ಮ್ಯಾರೇಜ್! ಅದು ಹೇಗಾಯಿತು ಏನಾಯಿತು ಎಂದೆಲ್ಲ ಕೇಳಬೇಡಿ. ನೌ ಇದೆಲ್ಲ ಏನೂ ಅಲ್ಲ ಅಥವಾ ವಿಶೇಷದ್ದಲ್ಲ' ಎಂದರು.

ಆ ಮಾತು ಅಲ್ಲಿಗೆ ನಿಂತಿತ್ತು. ಆಮೇಲೆ ರಾಯರ ಅಪೇಕ್ಷೆ ಮೇರೆಗೆ ಜಯಂತಿ ಬ್ರೂ ಕಾಫಿ ಸಿದ್ಧಪಡಿಸಿ ತಂದಿಟ್ಟಳು. ರಾಯರು ಒಂದೊಂದೇ ಸಿಪ್ ಕಾಫಿಯನ್ನು ಹೀರುವಾಗ ಸತೀಶರು, 'ಮಾವ ನಮ್ಮ ಕಾಲೇಜಿನಲ್ಲಿ ಇದೇ ತಿಂಗಳಲ್ಲಿ ಕನ್ನಡ ವಿಭಾಗದ ಮಂಜುನಾಥಯ್ಯ ನಿವೃತ್ತರಾಗುತ್ತಾರೆ ಎನ್ನುವುದು ನನಗೆ ಗೊತ್ತಾಗಿದೆ. ನನ್ನ ಹೆಂಡತಿಯನ್ನು ಆ ಪೋಸ್ಟಿಗೆ ಯಾಕೆ ಪ್ರಯತ್ನ ಮಾಡಬಾರದು ಎಂಬ ಆಸೆ ನನಗೆ ಹುಟ್ಟಿದೆ. ಏನನ್ನುತ್ತೀರಿ ನೀವು?' ಎಂದು ಪ್ರಶ್ನಿಸಿದರು.

'ಆಫ್‌ಕೋರ್ಸ್, ಖಂಡಿತ ಮಾಡಬಹುದು'.

'ಆದರೆ ಅದು ಹೇಗೆ ಎಂಬುದೆಲ್ಲ ನನಗೆ ಗೊತ್ತಿಲ್ಲ ಮಾವ. ನನಗೇನೊ ಅಯಾಚಿತವಾಗಿ ಈಗಿರುವ ಪೋಸ್ಟ್ ಸಿಕ್ಕಿದೆ. ನಾನು ಓದಿದ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದವರ ದೂರದ ಸಂಬಂಧಿಯಂತೆ ಈ ನಮ್ಮ ಕಾಲೇಜಿನ ಪ್ರಾಂಶುಪಾಲರು. ನಾನು ನಮ್ಮ ಪ್ರಾಂಶುಪಾಲರಿಂದ 'ಒಂದು ಮಾತು' ಹೇಳಿಸಿದ್ದರಿಂದ ನನ್ನ ಅಪಾಯಿಂಟ್‌ಮೆಂಟ್ ಸುಲಭದಲ್ಲಿ ಆಯ್ತು. ಬಟ್ ಈಗ ನನ್ನ ಹೆಂಡತಿಗೆ ಅವರ ಪ್ರಭಾವ ಬಳಸುವುದು ಕಷ್ಟ ಸಾಧ್ಯ'.

'ಎಸ್, ಹೌದು ಹೌದು! ಮತ್ತೆ ಮತ್ತೆ ಅವರನ್ನು ಕೇಳೋದು ಸರಿ ಅಲ್ಲ!'

'ಹಾಗಾದರೆ ಏನೂ ದಾರಿಯೇ ಇಲ್ವಾ ಮಾವ?'

'ಹಾಗೆಂದು ನಾನು ಹೇಳಿಲ್ಲ' ಎಂದು ಕಾಫಿಯನ್ನು ಪೂರ್ತಿ ಹೀರಿದ ರಾಯರು ಕಾಫಿಯ ಕಪ್ ಅನ್ನು ಟೀಪಾಯಿಯ ಮೇಲಿಟ್ಟು ಸಣ್ಣಗೆ ತಲೆಯನ್ನು ತುರಿಸುತ್ತಾ, 'ಎಸ್ ಎಸ್, ಅದೇ ಸರಿ' ಎಂದು ತಮ್ಮಷ್ಟಕ್ಕೆ ತಾವು ಹೇಳುತ್ತಾ, 'ನೋಡಪ್ಪ ಸತೀಶ, ನಾವು ನಮ್ಮ ಮ್ಯಾನೇಜ್‌ಮೆಂಟಿನ ಅಧ್ಯಕ್ಷರನ್ನು ನೋಡೋಣ. ಅವರು ಜಂಟಲ್‌ಮನ್. ನಾನೆಂದರೆ ಅವರಿಗೆ ತುಂಬಾ ಇಷ್ಟ. ನಾನು ಅವರ ಭೇಟಿಗೆ ಹೋಗೋದೇ ಅಪರೂಪ. ಹೋದಷ್ಟು ಸಲ, ಏನು ಬರೆದಿರಿ ಮೇಷ್ಟ್ರೆ ಎನ್ನುವುದು ಅವರ ಮೊದಲಪ್ರಶ್ನೆ. ಆಗ, ಏನೂ ಇಲ್ಲ ಎಂದು ಅಂದರೆ, ಇನ್ನು ಯಾರು ಬರೆಯುತ್ತಾರೆ ನೀವು ಬರೆಯುವಂಥ ವಿಚಾರ? ನೀವು ವಚನಸಾಹಿತ್ಯವನ್ನು ತುಂಬಾ ಚೆನ್ನಾಗಿ ಓದಿದ್ದೀರಿ ಮತ್ತು ವಿಶಿಷ್ಟರೀತಿಯಲ್ಲಿ ವ್ಯಾಖ್ಯಾನಿಸುತ್ತೀರಿ. ನನಗೆ ನೀವು ಬಸವಣ್ಣನ ಮತ್ತು ಅಲ್ಲಮನ ಬಗ್ಗೆ ಈ ಹಿಂದೆ ಬರೆದ ಎರಡು ಲೇಖನಗಳು ತುಂಬ ಇಷ್ಟವಾಗಿದ್ದುವು. ಇಂದಿನ ಶರಣ ಚಿಂತಕರೆಲ್ಲ ನಿಮ್ಮ ಹಾಗೆ ಬರೆದಿಲ್ಲ! ಅದಕ್ಕೆ ನನಗೆ ನಿಮ್ಮ ಬಗ್ಗೆ ಏನೋ ಒಂದು ನಿರೀಕ್ಷೆ. ಬಟ್ ಆ ನಿರೀಕ್ಷೆಯನ್ನು ನೀವು ಇಗ್ನೋರ್ ಮಾಡಬಾರದು ಎಂದು ಪ್ರಾರಂಭಿಸಿ, ಈಗ ಏನು ಬಂದಿರಿ? ಎಂದು ನನ್ನನ್ನು ಕೇಳುತ್ತಲೇ ಇರುತ್ತಾರೆ. ನಾನು, ಥ್ಯಾಂಕ್ ಯು ಸರ್. ಖಂಡಿತ ಬರೆಯುತ್ತೇನೆ ಎಂದು ಹೇಳಿ, ನನ್ನದೇನಾದರೂ ಚಿಕ್ಕಪುಟ್ಟ ಅಹವಾಲುಗಳು ಇದ್ದಾಗ ಅವನ್ನು ಅವರ ಮುಂದೆ ಇಡುತ್ತಿದ್ದೆ. ಆಗ ಅವರು, ಎಸ್ ಡನ್ ಎನ್ನುವರು' ಎಂದ ರಾಯರು, ತಮ್ಮ ಮತ್ತು ಟ್ರಸ್ಟಿನ ಅಧ್ಯಕ್ಷರ ಸಂಬಂಧವನ್ನು ವಿವರಿಸಿ, 'ನಿಮ್ಮ ಹೆಂಡತಿಯ ವಿಚಾರವನ್ನು ಅವರ ಮುಂದಿಟ್ಟರೆ ಪಾಸಿಟಿವ್ ಆನ್ಸರ್ ಬರಬಹುದು ಅನಿಸುತ್ತದೆ' ಎಂದರು.

ಸತೀಶರಿಗೆ ಎದ್ದು ರಾಯರ ಕಾಲು ಹಿಡಿಯಬೇಕು ಎನ್ನುವಷ್ಟು ಉದ್ವೇಗ ಮತ್ತು ಸಂತೋಷವಾಯಿತು. ಜಯಂತಿಯ ಕಣ್ಣಲ್ಲಿ ಮಿಂಚು ಮಿಂಚಿ ಅಲ್ಲಿ ಕಾಮನಬಿಲ್ಲು ಹುಟ್ಟಿ ಅದು ಅವಳ ಹುಬ್ಬುಗಳ ನಡುವೆ ಹಾದು ಹೋಯಿತು.

ರಾಯರು ದಿಢೀರಾಗಿ ತನ್ನ ಕಾಲುಮುಟ್ಟಿ ನಮಸ್ಕರಿಸಿದ ಸತೀಶ್ ಕುಲಕರ್ಣಿಯವರನ್ನು ಹಿಡಿದೆತ್ತಿ, 'ಛೆ! ಛೆ! ಇಂತದ್ದೆಲ್ಲ ಮಾಡಬಾರದು. ಐ ಡೋಂಟ್ ಲೈಕ್ ದಿಸ್' ಎಂದು ನಯವಾಗಿ ನಿರಾಕರಿಸಿ, 'ಅವಸರ ಬೇಡ ಸತೀಶ್. ತಿಂಗಳೊಪ್ಪತ್ತಿನಲ್ಲಿ ನಾನು ಅವರನ್ನು ಒಮ್ಮೆ ಕಾಲೇಜಿಗೆ ಕರೆಸುವ ಯೋಚನೆ ಹಾಕಿದ್ದೇನೆ. ಆ ಕಾರ್ಯಕ್ರಮ ಮುಗಿಯಲಿ. ಆಮೇಲೆ ಈ ವಿಷಯದ ಕುರಿತು ಮಾತನಾಡಲು ಹೋಗುತ್ತೇನೆ. ಆಗ ನೀವಿಬ್ಬರು ಬನ್ನಿ' ಎಂದರು.

ವಾರದ ಮೇಲೆ ಕಾಲೇಜಿನ ಸಾಹಿತ್ಯ ಸಂಘದಲ್ಲಿ ಮುಂದಿನ ತಿಂಗಳು ಹದಿನೆಂಟರಂದು ನಡೆಯುವ ಕಾರ್ಯಕ್ರಮದ ಆಮಂತ್ರಣವನ್ನು ಸತೀಶರ ಕೈಯಲ್ಲಿಟ್ಟ ರಾಯರು, 'ವೆರಿ ಇಂಟರೆಸ್ಟಿಂಗ್ ಪರ್ಸನಾಲಿಟಿ ಇರುವವರೊಬ್ಬರು ಈ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾರೆ ಸತೀಶ್. ನಿಮಗೆ ಇಂಥದ್ದರಲ್ಲಿ ಆಸಕ್ತಿ ಇಲ್ಲ ಎಂದು ನನಗೆ ಗೊತ್ತು. ಬಟ್ ಯು ಮಸ್ಟ್ ಡೆವಲಪ್ ಸಚ್ ಇಂಟರೆಸ್ಟ್' ಎನ್ನುತ್ತಾ ಸತೀಶ ಕುಲಕರ್ಣಿಯವರ ಬೆನ್ನನ್ನು ಪೂಸಿ, 'ಕಳೆದ ಐದು ವರುಷಗಳಲ್ಲಿ ವರ್ಷಕ್ಕೆ ಒಬ್ಬರ ಹಾಗೆ ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಗಿರೀಶ್ ಕಾಸರವಳ್ಳಿ ಇವರನ್ನೆಲ್ಲ ನಾನು ಕರೆಸಿದ್ದು ನಿಮಗೆ ಗೊತ್ತಿದೆ. ಈ ವರ್ಷ ವಿಶ್ವನಾಥ ಖೈರೆ ಎಂಬ ಮರಾಠಿ ಚಿಂತಕರೊಬ್ಬರನ್ನು ಕರೆಸುತ್ತಿದ್ದೇನೆ' ಎಂದರು.

ಸತೀಶ ಕುಲಕರ್ಣಿ ವಿನಮ್ರವಾಗಿ 'ನಾನು ಖಂಡಿತ ಬರ್ತೇನೆ ಸರ್' ಎಂದರು.

ರಾಯರು 'ಗುಡ್. ನಿಮ್ಮ ಮಾತನ್ನು ನೀವು ಎಷ್ಟು ಉಳಿಸಿಕೊಳ್ಳುತ್ತೀರಿ ಅಂತ ನೋಡುತ್ತೇನೆ' ಎಂದು ನಗುತ್ತಾ, 'ಈ ಖೈರೆ ಅನ್ನುವವರು ಇದ್ದಾರಲ್ಲ, ಅದ್ಭುತ ವ್ಯಕ್ತಿ. ಅವರ ಹುಟ್ಟೂರು ಪುಣೆಯ ಸುಪೆ. ಸಿವಿಲ್ ಇಂಜಿನಿಯರ್ ಪದವೀಧರರಾಗಿ ಭಾರತ ಸರಕಾರದ ದೊಡ್ಡ ಇಲಾಖೆಯೊಂದರ ಚೀಫ್ ಇಂಜಿನಿಯರಾಗಿ ಸೇವೆ ಸಲ್ಲಿಸಿದ್ದ ಅವರು ಜಮ್ಮು ಕಾಶ್ಮೀರ ರಾಷ್ಟ್ರೀಯ ಹೆದ್ದಾರಿ, ಜವಾಹರ ಸುರಂಗ, ನೇಪಾಳದ ಸಿದ್ಧಾರ್ಥ ರಾಷ್ಟ್ರೀಯ ಹೆದ್ದಾರಿ ಮೊದಲಾದವುಗಳ ನೇತೃತ್ವ ವಹಿಸಿದ್ದರು. ಮರಾಠಿಯಲ್ಲದೆ, ಇಂಗ್ಲಿಷ್, ಹಿಂದಿ, ಸಂಸ್ಕೃತ, ನೇಪಾಳಿ, ತಮಿಳು ಭಾಷೆಗಳನ್ನು ಅವರು ಚೆನ್ನಾಗಿ ಬಲ್ಲವರಿದ್ದು ನಮ್ಮಲ್ಲಿನ ಶಂಬಾ ಜೋಶಿಯವರ ಹಾಗೇ ಇರುವ ಚಿಂತಕರು. ಅವರದ್ದು ಸಂಶೋಧನೆ ಮತ್ತು ಚಿಂತನೆಗೆ ಒತ್ತುಕೊಡುವ ಬರೆಹಗಳೇ ಹೆಚ್ಚು. ಅವರು 'ಏಕಲವ್ಯ', 'ವಂಶಾಚಾ ವ್ಯಾಸ', 'ಯುರೇಕಾ', 'ಹಿರಕನಿ', 'ಘೋಡ್ಯಾ ಪುಢೇ ಗೀತಾ' ಎನ್ನುವ ನಾಟಕಗಳನ್ನು ಬರೆದಿದ್ದಾರೆ. ಆದರೆ ಇವುಗಳಿಗಿಂತ ದೊಡ್ಡ ಹೆಸರು ಅವರಿಗೆ ಬಂದದ್ದು ಅವರ ಇತರ ಕೃತಿಗಳಿಗೆ. 'ದ್ರಾವಿಡ ಮಹಾರಾಷ್ಟ್ರ', 'ಭಾರತೀಯ ಮಿಥ್ಯಾಂಚಾ ಮಾಗೋವಾ', 'ವೇದಾತಿಲ ಗಾಣೇ' 'ಜ್ಞಾನೇಶ್ವರಾಂಚೇ ಚಮತ್ಕಾರ' ಮೊದಲಾದವುಗಳಿಂದ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಭಾಷಾ ಸನ್ಮಾನ್ ಪ್ರಶಸ್ತಿ, ಮಹಾರಾಷ್ಟ್ರ ಶಾಸನ ಪ್ರಶಸ್ತಿಗಳಂಥವು ಬಂದಿವೆ. ಅವರು ಉಪನ್ಯಾಸಕ್ಕೆ ಬರುತ್ತಾರೋ ಇಲ್ಲವೋ ಎಂಬ ಆತಂಕ ನನಗೆ ಇತ್ತು. ಈಗ ಅವರು ಒಪ್ಪಿದ್ದು ತುಂಬ ಸಂತೋಷ ನೀಡಿದೆ' ಎಂದರು.

ಸತೀಶ್ ಕುಲಕರ್ಣಿ ಎರಡೆರಡು ಬಾರಿ ಆ ಆಮಂತ್ರಣವನ್ನು ಹಿಂದೆ ಮುಂದೆ ತಿರುಗಿಸಿ ನೋಡಿ, 'ತುಂಬಾ ಚೆನ್ನಾಗಿ ಆಮಂತ್ರಣ ಪ್ರಿಂಟ್ ಮಾಡಿಸಿದ್ದೀರಿ ಸರ್, ಕಂಗ್ರಾಟ್ಸ್' ಎಂದರು.

ರಾಯರು ಸುಮ್ಮನೆ ಮುಗುಳುನಕ್ಕು 'ನಾನು ಕಾಟಾಚಾರಕ್ಕೆ ಯಾವುದನ್ನೂ ಮಾಡುವುದಿಲ್ಲ ಕುಲಕರ್ಣಿ. ನಮ್ಮ ಬಸವೇಶ್ವರ ಕಾಲೇಜ್ ಟ್ರಸ್ಟಿನ